**<u>ಸಾಕ್ಷಿಗೆ ಕೇವಲ ಹಿಂದಿ ಭಾಷೆ ಮಾತ್ರ ಬರುತ್ತಿದ್ದು, ಶ್ರೀಮತಿ.ಎಂ.ಡಬ್ಲೂರವರನ್ನು ತರ್ಜುಮೆದಾರರನ್ನಾಗಿ ನೇಮಿಸಲಾಯಿತು.</u>**
**<u>ಸಾಕ್ಷಿಗೆ ದಿನಾಂಕ 28-03-2024 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು</u>**

**<u>ಪಾಟೀ ಸವಾಲುಃ 2 ಮತ್ತು 3 ನೇ ಪ್ರತಿವಾದಿಗಳ ಪರ ಶ್ರೀ.ಕೆ.ಜೆ.ಕೆ.ವಕೀಲರಿಂದ</u>**

ನನಗೆ 1 ರಿಂದ 3 ನೇ ಪ್ರತಿವಾದಿಗಳ ಪರಿಚಯ ಇರುವುದಿಲ್ಲ. ಸಾಕ್ಷಿಯು ಮುಂದುವರೆದು, 2 ಮತ್ತು 3 ನೇ ಪ್ರತಿವಾದಿಗಳು ದಾವಾ ಆಸ್ತಿಯ ಸ್ವಾಧೀನ ಪಡೆದುಕೊಂಡ ನಂತರ ನನಗೆ ಗೊತ್ತಾಗಿರುತ್ತದೆ.

ದಾವಾ ಆಸ್ತಿಯ ಸರ್ವೆ ನಂಃ 47/3 ಇದ್ದು ದಾವಾ ಆಸ್ತಿಯು ಹನುಮಾನ ನಗರ, ವಾಡಿಯಲ್ಲಿ ಇರುತ್ತದೆ. ಸದರಿ ಸರ್ವೆ ನಂಃ 47/3 ರ ಒಟ್ಟು ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ.

ಸರ್ವೆ ನಂಃ 47/3 ರ ಜಮೀನಿನ ಒಟ್ಟು ವಿಸ್ತೀರ್ಣ 5 ಎಕರೆ ಚಿಲ್ಲರೆ ಗುಂಟೆ ಇರಬಹುದು ಎಂದರೆ ಸರಿ. ಸದರಿ ಸರ್ವೆ ನಂಃ 47/3 ರ ಖಾಲಿ ಜಾಗೆಯಾಗಿದ್ದು, ದಾವಾ ಆಸ್ತಿಯ ಸದರಿ ಸರ್ವೆ ನಂಬರನ ಉತ್ತರ ಭಾಗದಲ್ಲಿ ಇರುತ್ತದೆ.

ದಾವಾ ಆಸ್ತಿಗೆ ಸಂಬಂಧಿಸಿದಂತೆ ನಾನು ನಕ್ಷೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವಾ ಆಸ್ತಿಯ ಸರ್ವೆ ನಂಬರನ ಆಜ್ಞೆಯ ದಿಕ್ಕಿಗೆ ಇರುತ್ತದೆ.

ದಾವಾ ಆಸ್ತಿಯನ್ನು ನಾನು ಖರೀದಿಸುವುದಕ್ಕಿಂತ ಮುಂಚೆ ಪಶ್ಚಿಮ ದಿಕ್ಕಿಗೆ ಸುರೇಶ ಎಂಬ ವ್ಯಕ್ತಿಯು ಒಂದು ಪ್ಲಾಟನ್ನು ಖರೀದಿ ಮಾಡಿದ್ದರು.

ಸರ್ವೆ ನಂಃ 47/3 ರ ಮೂಲ ಮಾಲೀಕರು ಜಾನ ತಂದೆ ಭೀಮಶಾ ಆಗಿದ್ದರು. ಸದರಿ ಜಮೀನನ್ನು ಜಾನ ಇತನು ಕೃಷಿಯೇತರ ಚಟುವಟಿಕೆಗಾಗಿ (NA) ಎಂದು ಮಾರ್ಪಡಿಸಿರುತ್ತಾನೆ ಎಂದರೆ ಸರಿ.

ಸದರಿ ಸರ್ವೆ ನಂಃ 47/3 ಅನ್ನು ಜಾನ ಇತನು NA ಮಾಡಿಸಿದ ನಂತರ ಸದರಿ ಎಲ್ಲಾ ಜಮೀನನ್ನು ಸುಂದರರಾಜ ಮತ್ತು ಪ್ರಕಾಶ ಎಂಬುವವರಿಗೆ ಮೃತ್ಯು ಪತ್ರ ಮಾಡಿರುತ್ತಾನೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸಾಕ್ಷಿಯು ಮುಂದುವರೆದು, ಜಾನ ಇತನಿಗೆ ಮಕ್ಕಳು ಇರಲಿಲ್ಲ ಎಂದು ನುಡಿಯುತ್ತಾರೆ.

ಮೃತ್ಯು ಪತ್ರ ಮಾಡಿದಾಗಿನಿಂದ ಸುಂದರರಾಜ ಮತ್ತು ಪ್ರಕಾಶ ಸರ್ವೆ ನಂಃ 47/3 ರ ಕಬ್ಜೆಯನ್ನು ಹೊಂದಿದ್ದು ಅದರ ಮೇಲ್ವೀಚಾರಣೆಯನ್ನು ಸದರಿಯವರೇ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ.

ಜಾನ ಇತನಿಗೆ ವಯಸ್ಸಾಗಿದ್ದರಿಂದ ಆತನಿಗೆ ಓಡಾಡಲು ಬರುತ್ತಿರಲಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು, ನಾನು ಆಸ್ತಿಯನ್ನು ಖರೇದಿ ಮಾಡುವ ಸಂಧರ್ಭದಲ್ಲಿ ಆತನು ಓಡಾಡುತ್ತಿದ್ದನು ಎಂದು ನುಡಿಯುತ್ತಾರೆ.

ಜಾನ ಇತನು ದಾವಾ ಆಸ್ತಿಯನ್ನು ದಿಃ 28-02-1984 ರಂದು ನನಗೆ ಮಾರಾಟ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ರಲ್ಲಿರುವ ಸಹಿ ಜಾನ ಇತನ ಸಹಿ ಅಲ್ಲ ಎಂದರೆ ಸರಿಯಲ್ಲ.

ಜಾನ ಇತನು ಯಾವಾಗ ಮರಣಹೊಂದಿರುತ್ತಾನೆ ಎಂದು ನನಗೆ ನಿಖರವಾಗಿ ದಿನಾಂಕ ಗೊತ್ತಿರುವುದಿಲ್ಲ. ಸಾಕ್ಷಿಯು ಮುಂದುವರೆದು, ಸದರಿ ಜಾನ ಇತನು 1984 ರಲ್ಲಿ ಮರಣಹೊಂದಿರುತ್ತಾನೆ ಎಂದು ನುಡಿಯುತ್ತಾರೆ.

ದಿಃ 14-03-1984 ರಂದು ಜಾನ ಇತನು ಮರಣಹೊಂದಿರುತ್ತಾನೆ ಎಂದರೆ ನನಗೆ ಗೊತ್ತಿರುವುದಿಲ್ಲ.

NA ಆದ ಜಮೀನು ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುವುದಿಲ್ಲ ಎಂದರೆ ಸಾಕ್ಷಿಯು ಸದರಿ ಜಮೀನಿನ ದಾಖಲಾತಿಗಳು ಗ್ರಾಮ ಪಂಚಾಯತಿ ಕಚೇರಿಯಲ್ಲಿ ಇದ್ದವು ಎಂದು ನುಡಿಯುತ್ತಾರೆ.

ನಾನು ಗ್ರಾಮ ಪಂಚಾಯತಿಯವರ ಅಧಿಕಾರಿಗಳೊಂದಿಗೆ ಶಾಮಿಲಾಗಿ ದಾಖಲಾತಿಗಳನ್ನು ಈ ದಾವೆಗೆ ಅನುಕೂಲವಾಗುವಂತೆ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿ ಮತ್ತು ಸುಂದರರಾಜ ಇವರು ಸರ್ವೆ ನಂಃ 47/3 ರ ಲೇಔಟ ಪ್ಲಾನನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಲೇಔಟ ಪ್ಲಾನ ಆದ ನಂತರ ಪ್ಲಾಟ ನಂಃ 32 ಮತ್ತು 33 ಗಳನ್ನು 1 ನೇ ಪ್ರತಿವಾದಿಯು 2 ಮತ್ತು 3 ನೇ ಪ್ರತಿವಾದಿಗಳಿಗೆ ಮಾರಾಟ ಮಾಡಿರುತ್ತಾನೆ ಎಂದರೆ ಸರಿಯಲ್ಲ.

2 ಮತ್ತು 3 ನೇ ಪ್ರತಿವಾದಿಗಳು ದಾವಾ ಆಸ್ತಿಯನ್ನು ಖರೀದಿ ಮಾಡಿದಾಗಿನಿಂದ ಅವರೇ ದಾವಾ ಆಸ್ತಿಯ ಸ್ವಾಧೀನವನ್ನು ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು, ನಾನು ಖರೀದಿ ಮಾಡಿದ ಪ್ಲಾಟನಲ್ಲಿ ನಾನೇ ಕಬ್ಜೆಯಲ್ಲಿ ಇರುತ್ತೇನೆ ಎಂದು ನುಡಿಯುತ್ತಾರೆ.

ನಾನು ದಾವಾ ಆಸ್ತಿಯನ್ನು ಖರೀದಿಸಿರುವುದಿಲ್ಲ ಮತ್ತು ಕಬ್ಜೆಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ 2 ಮತ್ತು 3 ನೇ ಪ್ರತಿವಾದಿಗಳ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಚಿತ್ತಾಪೂರ.